**ಓ ಎಸ್ ನಂ.442/14 ದಿಃ 19-08-2019. ಪಿ.ಡಬ್ಲ್ಯೂ.1.**
**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು ಃ- 1ನೇ ಪ್ರತಿವಾದಿಯ ಪರ ವಕೀಲರಾದ**
**ಶ್ರೀ. ಸಿ.ಎಸ್.ಎ. ಃ ವಕೀಲರಿಂದ ಃ-**

1980 ನೇ ಇಸವಿಯಲ್ಲಿ ನನ್ನ ತಂದೆ, ಪ್ರತಿವಾದಿಗಳು ಮತ್ತು ನಮ್ಮ ತಾತ ಪಂಚಾಯತ್ ಪಾರೀಕತ್ ಮುಖಾಂತರ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಾವಾಆಸ್ತಿಯು ನನ್ನ ತಾತನಿಗೆ ಅವರ ಅಣ್ಣತಮ್ಮಂದಿರ ವಿಭಾಗದಲ್ಲಿ ನನ್ನ ತಾತನ ಪಾಲಿಗೆ ಬಂದಿತ್ತು ಎಂದರೆ ಸರಿ. 1980 ರಲ್ಲಿ ಆದಂತಹ ವಿಭಾಗದಲ್ಲಿ ದಾವಾಆಸ್ತಿಯು ನನ್ನ ತಾತನ ಪಾಲಿಗೆ ಹೋಗಿದ್ದು ಸದರಿ ಆಸ್ತಿಯ ಖಾತೆ ಮತ್ತು ಪಹಣಿಯೂ ಸಹ ನನ್ನ ತಾತನ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನನ್ನ ತಂದೆಯ ಪಾಲಿಗೆ ಸರ್ವೆ ನಂ.99 ರ ಪೈಕಿ 1 ಎಕರೆ 18 ವರೆ ಗುಂಟೆ ಜಮೀನು, ಸರ್ವೆ ನಂ.19/2 ರಲ್ಲಿ 1 ಎಕರೆ ಜಮೀನು ಮತ್ತು ಸರ್ವೆ ನಂ.19/3 ರಲ್ಲಿ 14 ಗುಂಟೆ ಜಮೀನು ನನ್ನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾದಲ್ಲಿ 1ನೇ ಪ್ರತಿವಾದಿಗೆ ಸರ್ವೆ ನಂ.99 ರ ಪೈಕಿ 2 ಎಕರೆ ಜಮೀನು, ಸರ್ವೆ ನಂ.19/2 ರಲ್ಲಿ 31 ಗುಂಟೆ ಜಮೀನು ಮತ್ತು ಸರ್ವೆ ನಂ.19/3 ರಲ್ಲಿ 14 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾದಲ್ಲಿ 2ನೇ ಪ್ರತಿವಾದಿಗೆ ಸರ್ವೆ ನಂ.99 ರ ಪೈಕಿ 2 ಎಕರೆ ಜಮೀನು ಮತ್ತು ಸರ್ವೆ ನಂ.19/3 ರಲ್ಲಿ 1 ಎಕರೆ 20 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ನಾನು ಮತ್ತು ನನ್ನ ತಾತ ಮತ್ತು ನನ್ನ ತಂದೆಯ ಅಣ್ಣತಮ್ಮಂದಿರು ವಿಭಾಗವಾದ ನಂತರ ಅವರವರ ಪಾಲಿನ ಜಮೀನುಗಳಲ್ಲಿ ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿದ್ದೇವೆ ಎಂದರೆ ಸರಿ. ದಾವಾಆಸ್ತಿಯ ಖಾತೆ ಪಹಣಿ ನನ್ನ ತಾತನ ಹೆಸರಿಗೆ ಆಗಿರುವ ಬಗ್ಗೆ ನಾನು ಎಲ್ಲೂ ಪ್ರಶ್ನೆ ಮಾಡಿಲ್ಲ ಸಾಕ್ಷಿ ಮುಂದುವರೆದು ತನ್ನ ತಂದೆಯ ಸಹೋದರರು ಮತ್ತು ತನ್ನ ತಾತ ಗಲಾಟೆ ಮಾಡಿ ಪಂಚಾಯತ್ ಪಾರೀಕತ್ ಬರೆಸಿಕೊಂಡಿರುವುದಾಗಿ ನುಡಿಯುತ್ತಾರೆ. ಸದರಿ ವಿಚಾರವಾಗಿ ನಾನು ಪೋಲೀಸ್ ದೂರನ್ನು ಸಹ ದಾಖಲು ಮಾಡಿರುತ್ತೇನೆ. ನಾವೆಲ್ಲರೂ ಒಪ್ಪಿ ಪಂಚಾಯತ್ ಪಾರೀಕತ್

ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾತ ಪ್ರತಿವಾದಿಗಳೊಂದಿಗೆ ವಾಸವಾಗಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ತನ್ನ ತಂದೆಯೂ ಸಹ ಜೊತೆಯಲ್ಲಿ ವಾಸವಾಗಿರುವುದಾಗಿ ನುಡಿಯುತ್ತಾರೆ. ನನ್ನ ತಾತನ ಯೋಗಕ್ಷೇಮವನ್ನು ನನ್ನ ತಂದೆ ನೋಡಿಕೊಳ್ಳದ ಕಾರಣ ಅವರು ಪ್ರತಿವಾದಿಗಳೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾತ ಪ್ರತಿವಾದಿಗಳ ಮೇಲಿನ ಪ್ರೀತಿ ವಾತ್ಸಲ್ಯದಿಂದ ದಾವಾಆಸ್ತಿಯ ಪೈಕಿ 1 ಎಕರೆ 19 ಗುಂಟೆ ಜಮೀನನ್ನು 1ನೇ ಪ್ರತಿವಾದಿಗೆ ಮತ್ತು 1 ಎಕರೆ 19 ಗುಂಟೆ ಜಮೀನನ್ನು 2ನೇ ಪ್ರತಿವಾದಿಗೆ ದಿಃ 02.07.1998 ರಂದು ಮೃತ್ಯುಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ಮರಣ ಹೊಂದಿರುತ್ತಾರೆ ಎಂದರೆ ಸರಿ. 1 ಮತ್ತು 2ನೇ ಪ್ರತಿವಾದಿಗಳ ಹೆಸರಿಗೆ ದಾವಾಆಸ್ತಿಯ ಖಾತೆ ಮತ್ತು ಪಹಣಿ ದಿಃ 02.07.1998 ರಲ್ಲಿ ಮೃತ್ಯುಪತ್ರದ ಆಧಾರದ ಮೇಲೆ ಆಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ 1 ಮತ್ತು 2ನೇ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತನ್ನನ್ನು ಸದರಿ ಆಸ್ತಿಯ ಸ್ವಾಧೀನಕ್ಕೆ ಅವಕಾಶ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತನ್ನ ತಂದೆಗೆ ಕಾಲು ಮುರಿದು ಹೋಗಿರುವುದಾಗಿ ನುಡಿಯುತ್ತಾರೆ. ನನ್ನ ತಂದೆಯ ಕಾಲು ಮುರಿದು ಹೋಗಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ಅವರ ವಿರುದ್ದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ ಹೇಳಿ ಕೇಳಿ ಸರಿ ಇದೆ.**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ, ಗುಬ್ಬಿ**